
# ಸ್ನೇಹ ಸಿಂಧು

ಡಾ. ಜಿನದತ್ತ ಅ. ಹಡಗಲಿ ಅವರ
ಅಭಿನಂದನ ಗ್ರಂಥ



ಡಾ. ಜಿನದತ್ತ ಅ. ಹಡಗಲಿ ಅಭಿನಂದನ ಸಮಿತಿ
ಧಾರವಾಡ

**SNEHA SINDHU : Dr. Jinadatta A. Hadagali Avara Abhinandhana Grantha,** Honorary Editor: Dr. Veeranna Rajoor, Dr. Ajitprasad; Edited by: Dr. Y. M. Bajantri, Dr. R.V. Patil, Dr. Sangayya Shivappayyanamath

| | | |
|---|---|---|
| ISBN | : | 978-93-92427-59-6 |
| Publisher | : | Basu Prakashana, Dharwad<br>Mob. 9844035788 |
| © | : | Abhinandana Samiti |
| | | |
|---|---|---|
| First Edition | : | 2024 |
| Copies | : | 500 |
| Pages | : | xxxvi + 596 = 632 |
| Price | : | Rs. 500/- |
| Size | : | Demi 1/8 |
| Paper Used | : | 70 GSM N.S. Bookprint |

**ಸ್ನೇಹ ಸಿಂಧು :** ಡಾ. ಜಿನದತ್ತ ಅ. ಹಡಗಲಿ ಅವರ ಅಭಿನಂದನ ಗ್ರಂಥ

| | | |
|---|---|---|
| **ಗೌರವ ಸಂಪಾದಕರು** | : | **ಡಾ. ವೀರಣ್ಣ ರಾಜೂರ, ಡಾ. ಅಜಿತಪ್ರಸಾದ** |
| **ಸಂಪಾದಕರು** | : | ಡಾ. ವೈ.ಎಂ. ಭಜಂತ್ರಿ, ಡಾ. ಆರ್. ವಿ. ಪಾಟೀಲ<br>ಡಾ. ಸಂಗಯ್ಯ ಶಿವಪ್ಪಯ್ಯನಮಠ |
| ಪ್ರಕಾಶಕರು | : | ಬಸು ಪ್ರಕಾಶನ, ಧಾರವಾಡ |
| © ಹಕ್ಕುಗಳು | : | ಡಾ. ಜಿನದತ್ತ ಅ. ಹಡಗಲಿ ಅವರ ಅಭಿನಂದನ ಸಮಿತಿ, ಧಾರವಾಡ |
| | | |
|---|---|---|
| ಮೊದಲ ಮುದ್ರಣ | : | ೨೦೨೪ |
| ಪ್ರತಿಗಳು | : | ೫೦೦ |
| ಪುಟಗಳು | : | xxxvi + ೫೯೬ = ೬೩೨ |
| ಬೆಲೆ | : | ರೂ. ೫೦೦/– |
| ಪೇಪರ ಬಳಕೆ | : | ೭೦ ಜಿಎಸ್‌ಎಂ ಎನ್.ಎಸ್. ಬುಕ್‌ಪ್ರಿಂಟ್ |
| ಮುಖಪುಟ | : | ರವೀಂದ್ರ ವಿಶ್ವಜ್ಞ, ಧಾರವಾಡ |
| ಪುಟ ವಿನ್ಯಾಸ | : | ಜಾವೇದಖಾನ ತಡಕೋಡ, ಧಾರವಾಡ |
| ಮುದ್ರಕರು | : | ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್<br>ವಿಠ್ಠಲ ಮಂದಿರ ರೋಡ, ಗದಗ–582 101<br>ಮೊ. 9448223602, 9481523602, 8884495331 |

೫. ಗಿರೀಶ ಕಾರ್ನಾಡರ "ಯಯಾತಿ ನಾಟಕ" ...... ೫೩೭
• ಪ್ರೊ. ಬಿ. ಜಿ. ಬಿದರಿ

೬. ಜಗದ 'ಹೆಜ್ಜೆಗಳ' ಹುಡುಕಾಟ ...... ೫೪೩
• ಡಾ. ಬಿ. ಎಂ. ಶರಭೇಂದ್ರಸ್ವಾಮಿ

೭. ಡಾ. ಚಂದ್ರಶೇಖರ ಕಂಬಾರ ಅವರ 'ಜೈಸಿದ ನಾಯಕ' ...... ೫೫೩
• ಡಾ. ಸುಖದೇವ ಪಾನಬುಡೆ

೮. ಚಂದ್ರಶೇಖರ ಪಾಟೀಲ ಅವರ
"ಟಂಗರ ಬುಡ್ಡಣ್ಣ" ಒಂದು ವಿವೇಚನೆ: ...... ೫೫೯
• ಡಾ. ಶ್ರೀಮತಿ ಉಷಾದೇವಿ ಹಿರೇಮಠ

೯. ಪ್ರೊ. ಕೀರ್ತಿನಾಥ ಕುರ್ತುಕೋಟಿ ಅವರ 'ಆ ಮನಿ' ...... ೫೬೩
• ಶೋಭಾ ಚಪ್ಪರದಳ್ಳಿಮಠ

೧೦. ಸಮತಾ ಸಮಾಜದ ಕನಸಿನ ಅನಾವರಣ : ಪಂಚಮ...... ೫೭೫
• ಡಾ. ಅರ್ಜುನ ಗೊಳಸಂಗಿ

೧೧. ಅಲ್ಲವದಲ್ಲಿ ಕಲ್ಪ ಅಡಗಿಸಿದ ಶ್ಮಶಾನ ಕುರುಕ್ಷೇತ್ರಂ ...... ೫೭೮
• ಡಾ. ಎಂ. ಎಸ್. ಮಾಗಣಗೇರಿ

೧೨. ಸಂಘಟಕರ ದೃಷ್ಟಿಯಲ್ಲಿ ಶ್ರೀರಂಗರು ...... ೫೮೫
• ಶಶಿಧರ ನರೇಂದ್ರ

**ಭಾಗ–೭ ಪ್ರತಿಬಿಂಬ ಸಿಂಧು**

ಡಾ. ಜಿನದತ್ತ ಹಡಗಲಿಯವರ
ಸಾಂದರ್ಭಿಕ ಛಾಯಾಚಿತ್ರಗಳು ...... ೫೯೫

■■

# ಚಂದ್ರಶೇಖರ ಪಾಟೀಲ ಅವರ "ಟಿಂಗರ ಬುಡ್ಡಣ್ಣ" ಒಂದು ವಿವೇಚನೆ:

ಡಾ. ಶ್ರೀಮತಿ ಉಷಾದೇವಿ ಹಿರೇಮಠ

ಪ್ರೀತಿಯಿಲ್ಲದೆ ಏನನ್ನೂ ಮಾಡಲಾರೆ; ದ್ವೇಷವನ್ನು ಕೂಡ ಎಂಬ ಅರ್ಥಪೂರ್ಣ ಮಾತನ್ನು ಹೇಳಿದ ಚಂದ್ರಶೇಖರ ಪಾಟೀಲರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡವರು. ಇಂಗ್ಲೀಷ ಪ್ರಾಧ್ಯಾಪಕರಾಗಿದ್ದರೂ ಕೂಡ, ಪ್ರತಿಷ್ಠೆ, ಬಿಗುಮಾನಗಳು ಇವರ ಬಳಿ ಸುಳಿದಿಲ್ಲ. ಎಲ್ಲರೊಂದಿಗೂ ಪ್ರೀತಿ, ಸ್ನೇಹಗಳನ್ನು ಸಂಪಾದಿಸಿ ಎಲ್ಲರೊಳಗೊಂದಾದವರು. ಕವಿಗಳಾಗಿ, ನಾಟಕಕಾರರಾಗಿ, ಹೋರಾಟಗಾರರಾಗಿ, ಬಹು ಮಹತ್ವದ ಚಿಂತನೆಗಳಿಂದ ಕೂಡಿದ ಇವರ ಸಂಪಾದಕತ್ವದಲ್ಲಿ ಮೂಡಿ ಬಂದ **ಸಂಕ್ರಮಣ** ಪತ್ರಿಕೆಯು ನಾಡಿನಾದ್ಯಂತ ಹೆಸರು ಮಾಡಿತ್ತು. ಈ ಮೂಲಕ ಜನ ಮಾನಸದಲ್ಲಿ ಹೊಸ ಬಗೆಯ ಚಿಂತನೆಗಳಿಗೆ ಅನುವು ಮಾಡುತ್ತಾ ವಿಚಾರಕ್ರಾಂತಿಗೆ ಆಹ್ವಾನ ಕೊಟ್ಟವರು.

**ಕೊಡೆಗಳು, ಅಪ್ಪ, ಟಿಂಗರ ಬುಡ್ಡಣ್ಣ, ಕುಂಟಾ ಕುಂಟಾ ಕುರವತ್ತಿ, ಗೋಕರ್ಣದ ಗೌಡಶ್ಯಾನಿ** ನಾಟಕಗಳು ಜಾನಪದ ಸೊಗಡಿನೊಂದಿಗೆ ಮೂಡಿ ಬಂದಿವೆ. ಅಸಂಗತ ನಾಟಕ ಪ್ರಕಾರವನ್ನು ಬಳಸಿಕೊಂಡು ವಿಶಿಷ್ಟ ಬಗೆಯ ಅಭಿವ್ಯಕ್ತಿಯನ್ನು ಕಣ್ಮುಂದೆ ತಂದು ನಿಲ್ಲಿಸುತ್ತಾರೆ. ಇಂಗ್ಲೀಷ ನಾಟಕಗಳ ಪ್ರೇರಣೆ, ನವ್ಯದ ಧೋರಣೆ ಯನ್ನು ಕಾಣುತ್ತೇವೆ. ವಿಡಂಬನೆಯನ್ನು ಹಾಸ್ಯದ ಮೂಲಕ ನವಿರಾಗಿ ಚಿತ್ರಿಸುತ್ತಾ ನಮ್ಮೊಳಗಿನ ತೊಳಲಾಟಗಳ ಅಸ್ಪಷ್ಟತೆಯನ್ನು ಅನಾವರಣಗೊಳಿಸುತ್ತಲೇ, ಮನುಷ್ಯನ ಅವಿವೇಕದ ದುಸ್ಸಾಹಸಗಳನ್ನು ಚಿತ್ರಿಸುತ್ತವೆ. ಊಹಿಸಲಾರದ ಘಟನೆಗಳು ಹಠಾತ್ತಾಗಿ ಜರುಗಿ ಆಶ್ಚರ್ಯ ಮತ್ತು ಭಯದ ವಾತಾವರಣವನ್ನುಂಟು ಮಾಡುತ್ತವೆ.

ಕೇವಲ ಮೂರು ಪಾತ್ರಗಳ ಮೂಲಕ ಸಂಪೂರ್ಣ ನಾಟಕ ನಡೆಯುತ್ತದೆ. ನಾಟಕದ ಶೀರ್ಷಿಕೆಯು ಮಕ್ಕಳ ಕತೆಯಂತೆ ಎನಿಸುತ್ತದೆ. ಜನಪದ ಕತೆಯೊಂದು ನಾಟಕೀಯವಾಗಿ ಬಿಚ್ಚಿಕೊಳ್ಳುತ್ತಾ ಸಾಗುತ್ತದೆ. ಬದುಕಿನ

ವೈರುಧ್ಯಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ. ಮುದುಕ, ಮುದುಕಿ, ಹುಡುಗ ಎಂಬ ಪಾತ್ರಗಳ ಮೂಲಕ ನಾಟಕ ಬೆಳೆಯುತ್ತಾ ಹೋಗುತ್ತದೆ. ನಾಟಕದ ಭಾಷೆಯು ಪಗದ್ಯ ಎಂದು ಚಂಪಾ ಅವರೇ ಕರೆದಿದ್ದಾರೆ. ಗದ್ಯವೂ ಅಲ್ಲದ, ಪದ್ಯವೂ ಅಲ್ಲದ ಪಗದ್ಯ ಶೈಲಿಯಲ್ಲಿ ಬೆಳೆದು ಬಂದಿದೆ. ಪಾತ್ರಗಳು ಇದನ್ನು ಲಯಬದ್ಧವಾಗಿ ಬಳಸಿ ಸಮರ್ಥವಾಗಿ ಅಭಿನಯಿಸುವುಗಳಾಗಿವೆ. ಯಾವುದೇ ಚಾರಿತ್ರಿಕ, ಸಾಂಸ್ಕೃತಿಕ ಸಂಗತಿಗಳ ಕುರಿತು ಹೇಳದೆ, ತಾಯ್ತನದಿಂದ ವಂಚಿತಳಾದ ತಾಯಿಯ(ಮುದುಕಿ) ನೋವು, ದಂಪತಿಗಳ ಮಧ್ಯೆ ವಯಸ್ಸಿನ ಅಂತರ, ನಿಶ್ಚಿತ ಸಮಯಕ್ಕೆ ಮಕ್ಕಳಾಗದೇ, ಬದುಕಿನ ಮುಸ್ಸಂಜೆಯ ಹೊತ್ತಲ್ಲಿ ಹುಡುಗನ ಜನನ ಇವೆಲ್ಲವೂ ಹೊಂದಾಣಿಕೆಯಿಲ್ಲದೆ ಅಸಂಬದ್ಧವಾದ ಪಾತ್ರಗಳಾಗಿವೆ.

ನಾಟಕದ ಮೊದಲ ದೃಶ್ಯವು ಮುದುಕ – ಮುದುಕಿಯರ ಸಂಭಾಷಣೆಯೊಂದಿಗೆ ಪ್ರಾರಂಭವಾಗುತ್ತ ದಾಂಪತ್ಯದ ಮೊದಲ ಕ್ಷಣಗಳನ್ನು ಮೆಲುಕು ಹಾಕುತ್ತಾ ರಸಿಕತೆಯನ್ನು ಧ್ವನಿಸಿದರೂ, ಹತಾಶೆ, ನಿರಾಸೆಗಳ ಭಾವ ಸಮೃದ್ಧತೆಯನ್ನು ಕಾಣುತ್ತೇವೆ. ಮಕ್ಕಳಿಲ್ಲದ ನೋವಿನ ಬದುಕಿನ ಅನಾವರಣ, ವೃದ್ಧಾಪ್ಯ ಆವರಿಸಿದರೂ ಅದನ್ನು ಸ್ವೀಕರಿಸದ ಮನೋಭಾವವನ್ನು ಕಾಣುತ್ತೇವೆ. **"ಮುದುಕೀ ನಿನ್ನ ಕೈಯಾಗ ಕಡ್ಡೀ ಕೊಟ್ಟ ಹೇಳ್ತೇನಿ, ಬೀಳು ಅನ್ನ ಈಗ ಬೀಳ್ತೆನಿ, ನನಗ ಮುದುಕ ಅನಬ್ಯಾಡ – ಹಂಗಾರ ನನಗ ನೀ ಯಾಕ ಮುದುಕೀ ಅಂತೀ?"** ಎಂಬ ಸಂಭಾಷಣೆಯಲ್ಲಿ ಮೂಡಿ ಬರುವ ಬದುಕಿನ ಮುಸ್ಸಂಜೆಯ ಅವಸ್ಥೆಯನ್ನು ಒಪ್ಪಿಕೊಳ್ಳದೇ ಇರುವುದು ಸ್ಪಷ್ಟವಾಗಿ ತೋರುತ್ತದೆ.

**"ಬಯಕೀ ಬುತ್ತಿ ಯಾವಾಗ ತರಲಿ ಅನಕಂತ... ಮಣ್ಣ ಆದ್ಲು ನಮ್ಮವ್ವ, ಗಿಡಾ ಹುಟ್ಟಿಸಿ ಗಿಡಾ ಸತ್ತು, ಹೊಳಿ ತುಂಬಿಸಿ ಹಳ್ಳಾ ಬಂತು, ನನಗ ಬಯಕೀ ಹತ್ತಲಿಲ್ಲ"**, ಎನ್ನುವ ಬಂಜೆತನದ ನೋವಿನ ಅಭಿವ್ಯಕ್ತಿ ಬಹಳ ಸ್ಪಷ್ಟವಾಗಿದೆ. ಮತ್ತೆ ಮನಸ್ಸಿನ ಮೂಲೆಯಲ್ಲಿ ತಾಯಿಯಾಗುವ ಕನಸು ಕಾಣುತ್ತಾ – **ಅತ್ತರ ಅಳಲೆವ್ವ ನನ ಕೂಸು ನನಗಿರಲಿ'ಕೆಟ್ಟರ ಕೆಡಲಿ ಮನೆಗೆಲಸ"** ಎಂಬ ಮಾತುಗಳು ಮಗು ಹೆತ್ತ ಖುಷಿಯನ್ನು ಕೊಟ್ಟಿವೆ.

ಬುಡ್ಡಣ್ಣನ ಜನ್ಮ ಸಂದರ್ಭವೇ ಅಸಂಗತ ರೀತಿಯಲ್ಲಿದೆ. "ಎಲ್ಲ ಕ್ರಿಯೆಗಳು ನಿಸರ್ಗ ಸಹಜವಾಗಿ, ಪ್ರಕೃತಿ ನಿಯಮಕ್ಕೆ ತಕ್ಕಂತೆ ನಡೆದರೆ ಎಲ್ಲವೂ ಸರಳೀತ. ಆದರೆ ಅನೈಸರ್ಗಿಕವಾಗಿ ಉಗಮಗೊಂಡದ್ದು ಹಾಗೆಯೇ ಬೆಳೆದು ಅದು ಮುಟ್ಟಬೇಕಾದ ತಾರ್ಕಿಕ ಕೊನೆಯು ಅಷ್ಟೇ ಅಸಂಗತವಾಗುತ್ತದೆ.

ಶಕ್ತಿ ಸಂಚಯದ ಈ ಕಾಲದಲ್ಲಿ ಮಾನವನ ಬದುಕು ಎದುರಿಸಬೇಕಾದ ಸಾಧ್ಯತೆಯನ್ನು 'ಟಿಂಗರ ಬುಡ್ಡಣ್ಣ' ನಾಟಕವು ಧ್ವನಿಸುತ್ತದೆ. (ಚಂದ್ರಶೇಖರ ಪಾಟೀಲ – ಚಿಂತನಶೀಲ ಸಾಹಿತಿ ಮತ್ತು ಜನಪರ ಹೋರಾಟಗಾರ. ಪ್ರೊ. ಜಿ. ಚಂದ್ರಶೇಖರ.)

ವಯಸ್ಸಾದ ದಂಪತಿಗಳಿಗೆ ಹುಟ್ಟಿದ ಗಂಡು ಮಗುವು ಆಕಾರದಲ್ಲಿ ಕುಬ್ಜನಾಗಿದ್ದು ನೋಡಿದವರಿಂದ ಹಾಸ್ಯಕ್ಕೆ ಒಳಗಾಗುವ ವ್ಯಕ್ತಿತ್ವ ಹೊಂದಿರುತ್ತಾನೆ. ಎಲ್ಲರಿಂದಲೂ ಅನಿಸಿಕೊಳ್ಳುತ್ತಾ ಬೇಸರವನ್ನು ಅನುಭವಿಸುತ್ತಾನೆ. ಇದರಿಂದ ಮನನೊಂದ ಹುಡುಗ ತಾಯಿಯ ಮುಂದೆ ತನ್ನ ನೋವನ್ನು ಹಂಚಿಕೊಳ್ಳುವ ಪರಿ –

ಪಾತರಗಿತ್ತೀ ಇಣಚೀ ಕೂಡಿ
ಟೊಂಗಿ, ಟೊಂಗಿ ಜಿಕ್ಕಂತ
ಹೂವು ಹೂವು ಹಾರಿಕೊಂತ
ಬುಡ್ಡಾ ಬುಡ್ಡಾ ಬಂದಾ
ಉಳ್ಳಾಗಡ್ಡಿ ಬುಡ್ಡಾ
ಅಂತಾವಬೇ

ಹೀಗೆ ಇದೆ ರೀತಿಯಾಗಿ ಸಾಲಿ ಹುಡುಗರು, ಮಾಸ್ತರು ಅಣಕಿಸುವುದನ್ನು ತಾಯಿಯ ಮುಂದೆ ಹೇಳಿದಾಗ, ತಾಯಿ ಇದರ ಪರಿಹಾರಕ್ಕಾಗಿ ಮಂತ್ರಾ ಹೇಳ್ತನಿ, ಎಂದು ಮಂತ್ರ ಹೇಳಿಕೊಟ್ಟು, ಅಣಕಿಸುವವರಿಗೆ ಅದರ ಪ್ರಯೋಗ ಹೇಳಿ ಕೊಡುತ್ತಾಳೆ. ಹುಡುಗ ತಾಯಿಯಿಂದ ತಿಳಿದ ಮಂತ್ರವಿದ್ಯೆಯನ್ನು ಪ್ರಯೋಗಿಸುತ್ತಾ ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾನೆ. ಆದರೆ ಇದೆ ತಂತ್ರವು ಕೊನೆಗೆ ತನಗೇ ಮಾರಕವಾಗುವುದು, ಮುದುಕ – ಮುದುಕಿಯ ಸಾವು ಹುಡುಗನಿಂದಲೇ ನಡೆಯುವುದು ಇಲ್ಲಿಯ ದುರಂತವಾಗಿದೆ.

'ಮಾಡಿದ್ದುಣ್ಣೋ ಮಾರಾಯ'ಎನ್ನುವಂತೆ ತಾಯಿಯು ಸಿಟ್ಟಿನಲ್ಲಿ ಮಗನಿಗೆ ಬುಡ್ಡಾ ಎನ್ನುತ್ತಾಳೆ. ಇದರಿಂದ ಕುಪಿತಗೊಂಡ ಹುಡುಗ ತಾಯಿಯ ಮೇಲೆಯೂ ಮಂತ್ರ ಪ್ರಯೋಗಿಸಿದ ಕೂಡಲೇ ತಾಯಿಯು ಸತ್ತು ಹೋಗುತ್ತಾಳೆ. ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟಂತ ಸಂದರ್ಭ ಇಲ್ಲಿಯದು. ಅವಿವೇಕಿಗಳ ಕೈಗೆ ಅಧಿಕಾರ ಸಿಕ್ಕರೆ ಆಗುವ ಅನಾಹುತ, ದುರಂತಗಳ ಭೀಕರತೆ ಇವುಗಳನ್ನು

ಗಟ್ಟಿಯಾಗಿ ಧ್ವನಿಸುತ್ತವೆ. ಮುದುಕಿಯನ್ನು ಹುಡುಕಿಕೊಂಡು ಬಂದ ಮುದುಕನಿಗೂ ಇದೆ ಅವಸ್ಥೆಯಾಗುತ್ತದೆ. ಕೊನೆಗೆ ಬುಡ್ಡಣ್ಣನು ತಾನೇ ತಿಂದು ಎಸೆದ ಬಾಳೆ ಹಣ್ಣಿನ ಸಿಪ್ಪೆಯ ಮೇಲೆ ಕಾಲಿಟ್ಟು ಜಾರಿ ಮಂತ್ರ ಉಚ್ಚರಿಸಿ, ಸಾವಿಗೆ ಶರಣಾಗುತ್ತಾನೆ.

ಮಕ್ಕಳ ನಾಟಕದಂತೆ ಆಟ ಆಡಿದ ಇಲ್ಲಿಯ ಪಾತ್ರಗಳು ಕೊನೆಯಲ್ಲಿ ಬದುಕನ್ನೆ ಕೊನೆಗೊಳಿಸಿಕೊಂಡ ದುರಂತ ಮುಖಗಳಾಗಿವೆ. ಯಾವುದೇ ತಾಂತ್ರಿಕ ಸಿದ್ಧಿಯ ಪರಿಣಾಮ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳು ತನ್ನನ್ನು ಒಳಗು ಮಾಡಿಕೊಂಡೇ ಕಾರ್ಯ ನಿರ್ವಹಿಸುತ್ತಿರುತ್ತದೆ. ಇವತ್ತಿನ ವೈಜ್ಞಾನಿಕ ಬೆಳವಣಿಗೆಗಳಿಂದ ಕೂಡಾ ಎಷ್ಟೇ ಎತ್ತರ ಸಾಧನೆ ಆಗಿದ್ದರೂ ಅದರ ಒಟ್ಟಾರೆ ಫಲ ನಮ್ಮನ್ನು ಸುತ್ತಿಕೊಂಡೆ ಬರುತ್ತದೆ. ಕಾಡು ಕಡಿದು ನಾಡ ಕಟ್ಟಿದ ಮಾನವ ಇಂದು ಅನೇಕ ಸಮಸ್ಯೆಗಳಿಂದ ಒದ್ದಾಡುತ್ತಿದ್ದಾನೆ. ಜ್ಞಾನ - ವಿಜ್ಞಾನದಿಂದ ಪ್ರಬುದ್ಧನಾದ ಮಾನವ ಇಂದು ತನ್ನ ಬದುಕಿಗಾಗಿ ತಾನೇ ಬಡಿದಾಡುತ್ತಿದ್ದಾನೆ. ಈ ನಿಟ್ಟಿನಲ್ಲಿ "ಟಿಂಗರ ಬುಡ್ಡಣ್ಣ" ನಾಟಕವು ಶಕ್ತಿ ಸಂಚಯದ ಈ ಎಲ್ಲ ಸಂಗತಿಗಳನ್ನು ಅದ್ಭುತವಾಗಿ ಕಟ್ಟಿಕೊಡುವ ತಾತ್ವಿಕ ಕಲಾಕೃತಿಯಾಗಿದೆ. "ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ತನ್ನನ್ನೇ ಸುತ್ತಿ ಸಾವಂತೆ" – ಅಕ್ಕನ ವಚನದ ಆಶಯವನ್ನು ಈ ನಾಟಕವು ಬಹಳ ಸ್ಪಷ್ಟವಾಗಿ ಧ್ವನಿಸುತ್ತದೆ.

■